'ಅಡ್ಡೂರು' ಮೂಲಭೂತ ಸೌಕರ್ಯಗಳಿಲ್ಲದ ಹಳ್ಳಿಯ ಸಮಸ್ಯೆಗಳನ್ನು ಎತ್ತಿ ತೋರಿಸುತ್ತ ಅದರಿಂದಾಗುವ ಅಪಾಯಗಳತ್ತ ಬೆರಳು ತೋರಿಸುತ್ತದೆ. 'ತಮಳ'ದಲ್ಲಿ ಅಸಹಾಯಕ ಸ್ಥಿತಿಯಲ್ಲಿದ್ದ ತಾಯಿ, ಮಗನ ಓದಿಗಾಗಿ ಚಡಪಡಿಸುವ ಚಿತ್ರಣವಿದೆ. 'ಅರೆ ಹುಚ್ಚು' ಕಥೆ ಸೈನಿಕನೊಬ್ಬನ ಮಾನಸಿಕ ವಿಕೃತಿಯನ್ನು ಹೇಳುತ್ತದೆ. ಜೊತೆಗೆ ಸೈನ್ಯದ ಅಸ್ಥಿರ ಬದುಕಿನ ತಲ್ಲಣಗಳು ಯೋಚಿಸುವಂತೆ ಮಾಡುತ್ತದೆ. 'ಸಡಿಲಾದ ಸಂಕಲ್ಪ' ಒಬ್ಬ ಸೂಲಗಿತ್ತಿಯ ಮಾನಸಿಕ ತೊಳಲಾಟ ಚಿತ್ರಿಸುತ್ತದೆ. 'ಸುಮತಿ'ಯಲ್ಲಿ ನೌಕರಿಗೆ ಹೋಗುವ ಹೆಣ್ಣಿನ ಅಂತರಂಗದ ತುಮುಲವಿದೆ. 'ಬಯೋನೆಟ್ ಫೈಟಿಂಗ್' ಸೈನ್ಯದ ಕಡಕ್ ಶಿಸ್ತಿನ ಒಂದು ಸನ್ನಿವೇಶ ಕಣ್ಣೆದುರು ನಿಲ್ಲಿಸುತ್ತದೆ. 'ನೀನು ಮರಳಿ ಹೇಗೆ ಬಂದೆ' – ಸೈನ್ಯದ ಶಿಬಿರಗಳಲ್ಲಿ ನಡೆಯುವ ಕೃತ್ಯಗಳತ್ತ ಬೆರಳು ತೋರುತ್ತದೆ. 'ನೇಗಿಲು' ಕಥೆ ಮಾನವ ಸಂಬಂಧಗಳ ಜೊತೆಗೆ ನೇಗಿಲಿನ ಪ್ರೀತಿಯನ್ನು ಪ್ರತಿಪಾದಿಸುತ್ತದೆ. 'ಏಳು ಸೋದರ ಮಾವಂದಿರ ಅಳಿಯ' ಕಥೆಯಲ್ಲಿ ಏಳು ಸೋದರ ಮಾವಂದಿರು ಇದ್ದರೂ ಒಂದು ಊಟಕ್ಕೆ ತತ್ವಾರ ಎದುರಿಸುವ, ಮಾನವ ಸಂಬಂಧಗಳ ಸಾಚಾತನವನ್ನು ಪ್ರಶ್ನಿಸುತ್ತದೆ.

'ನೊಗ' ಕಥೆಯು ಒಂದು ಮೂಕ ಪ್ರಾಣಿ ಹೇಗೆ ಸೇಡು ತೀರಿಸಿಕೊಳ್ಳುತ್ತದೆ ಎಂಬುದನ್ನು, 'ಬೆಳಕಿನ ಹೆಜ್ಜೆ' ಹೆಣ್ಣು , ಸಂಪ್ರದಾಯ ಮತ್ತು ಸಮಾಜದ ಕಟ್ಟಳೆಗಳಿಂದ ಹೇಗೆ ಮುಕ್ತಳಾಗುತ್ತಾಳೆ ಎಂದು, 'ಒಂದು ಶೂನ್ಯ ಮರಣ' ಒಬ್ಬಾಕೆ ಹೆಣ್ಣು ಅಕಾಲಿಕ ಮರಣವನ್ನು ಅಪ್ಪಿದಾಗ ಮೂಢನಂಬಿಕೆಗಳು, ಬದುಕಿರುವವರನ್ನು ಹೇಗೆ ಸುತ್ತಿಕೊಳ್ಳುತ್ತವೆಯೆಂಬುದನ್ನು ವಿವರಿಸುತ್ತದೆ. 'ಕಾಡು ನಾಗಿಣಿ' ಅನಧಿಕೃತವಾಗಿ ಬಸಿರಾದ ಹೆಣ್ಣು ಪಡುವ ಮಾನಸಿಕ ಹಿಂಸೆಯನ್ನು, 'ಕೊಡತಿ' ಕಥೆ ಕಮ್ಮಾರರ ಅಲೆಮಾರಿ ಬದುಕಿನ ಅಸ್ಥಿರತೆಯನ್ನು, 'ನಾರಾಯಣಿ'ಯಲ್ಲಿ ಹೆಣ್ಣಿನ ಶೋಷಣೆಯ ಒಂದು ಮುಖವನ್ನು ಚಿತ್ರಿಸಲಾಗಿದೆ.

ಮಹಾಬಳೇಶ್ವರ ಸೈಲ್ ಅವರ ಸಮಗ್ರ ಸಾಹಿತ್ಯ ಪರಿಶೀಲಿಸಿದಾಗ ಅವರು ಜೀವನದ ವೈರುಧ್ಯ, ವೈವಿಧ್ಯಗಳನ್ನು ಚಿತ್ರಿಸಿದ್ದು ಕಾಣುತ್ತದೆ. ಮಿಲಿಟರಿ ಅನುಭವಗಳೊಂದಿಗೆ ಕಾಡಿನ ಅನುಭವಗಳನ್ನು ಕೊಂಕಣಿ ಸಾಹಿತ್ಯಕ್ಕೆ ನೀಡಿದರು. ಗೋವಾ ಶೈಲಿಯೊಂದಿಗೆ ಕಾರವಾರಿ ಕೊಂಕಣಿ ಶೈಲಿಯನ್ನು ಬೆರೆಸಿ ಹೊಸ ಶೈಲಿ ಸೃಷ್ಟಿಸಿದರು. ಅದು ಕೊಂಕಣಿ ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿತು. 1974ರಲ್ಲಿ ಮರಾಠಿಯಲ್ಲಿ ಪ್ರಥಮ ನಾಟಕ ಪ್ರಕಟಿಸಿದ ಮಹಾಬಳೇಶ್ವರ ಅವರು 1989ರಲ್ಲಿ ಕೊಂಕಣಿಯ ಪ್ರಥಮ ಕಥಾಸಂಗ್ರಹ ಪ್ರಕಟಿಸಿ ಅನಂತರ ಕಾದಂಬರಿ, ಪ್ರಬಂಧ ಸಾಹಿತ್ಯ ಬರೆದರು.

ಇವರ ಸಾಹಿತ್ಯ ಸೇವೆಯಲ್ಲಿ ಕೊಂಕಣಿ ಪುಸ್ತಕಗಳ ಸಂಖ್ಯೆಯೇ ಹೆಚ್ಚು. ಕಥಾಸಂಗ್ರಹಗಳು 'ಪಲ್ತಡಚೆ ತಾರೂ'(1989) 'ತರಂಗಾಂ' (1991), 'ಬಯೋನೆಟ್ ಫೈಟಿಂಗ್' (2005), 'ನಿಮಾಣೆ ಅಶ್ವತ್ಥಾಮೋ ದೋನ ಮುಖಾಚೆಂ ಝೂಡ' (2011).

**ಕೊಂಕಣಿ ಕಾದಂಬರಿಗಳು:** 'ಕಾಳಿಗಂಗಾ' (1996), 'ಅರಣ್ಯ ಕಾಂಡ' (1977), 'ಅದೃಷ್ಟ' (1997) 'ಯುಗಸಾಂವಾರ್'(2004), 'ಖೋಲ ಖೋಲ ಮುಳಾಂ' (2005), 'ಹಾವಠಣ'(2009') 'ವಿಖಾರ ವಿಳಖೋ' (2016), 'ಮಾತಿ ಅನಿ ಮಳಖ' (2017), 'ವಿನಾಶ ಪರ್ವ'(2023), 'ಹಿಂಸ್ರ ಭೋಗ' (2024).

'ಸೈಮ ದೇವ' (ಮಕ್ಕಳ ಕಾದಂಬರಿ 2015), 'ಸೃಜನ ಊರ್ಜಾ' (ಪ್ರಬಂಧಗಳು) 2012. ಇದಲ್ಲದೆ ಅವರು ಮರಾಠಿಯಲ್ಲಿ ನಾಲ್ಕು ಕಾದಂಬರಿ ಮತ್ತು ನಾಲ್ಕು ನಾಟಕಗಳನ್ನು ರಚಿಸಿದ್ದಾರೆ.

ಅವರಿಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಸೇರಿದಂತೆ ಗೋವಾದ ಕಲಾ ಅಕಾಡೆಮಿ, ಗೋವಾ ಕೊಂಕಣಿ ಭಾಷಾ ಮಂಡಳ, ಕೇಂದ್ರ ಸಾಹಿತ್ಯ ಅಕಾಡೆಮಿ, ಡಾ. ಟಿ.ಎಂ.ಎ.ಪಿ. ಪ್ರತಿಷ್ಠಾನ (ಮಣಿಪಾಲ)ದ ಪ್ರಶಸ್ತಿಗಳು, ಗೋವಾ ರಾಜ್ಯಪ್ರಶಸ್ತಿ, ನ್ಯೂಡೆಲ್ಲಿಯ ಕಥಾ ಚಳವಳಿಯ ಕಥಾ ಪ್ರಶಸ್ತಿ, ಜ್ಞಾನ ಗಂಗಾ ಸಾಹಿತ್ಯ ಪುರಸ್ಕಾರ, ವಿಮಲಾ ಪೈ – ಕೊಂಕಣಿ ಪ್ರಶಸ್ತಿ, (ವಿಶ್ವಕೊಂಕಣಿ ಕೇಂದ್ರ ಮಂಗಳೂರು), ಗೋವಾ ಕೊಂಕಣಿ ಅಕಾಡೆಮಿ ಪ್ರಶಸ್ತಿ ಮತ್ತು ಮಹಾರಾಷ್ಟ್ರ ರಾಜ್ಯ ಸಂಘ– ಸಂಸ್ಥೆಗಳ ಪ್ರಶಸ್ತಿಗಳೂ ಬಂದಿವೆ. ಇದೀಗ ಕುವೆಂಪು ರಾಷ್ಟ್ರೀಯ ಪುರಸ್ಕಾರದ ಗರಿ ಮುಡಿಗೇರಿದೆ. ●